**<u>ದಿನಾಂಕಃ 26.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಎಲ್.ಎ ವಕೀಲರಿಂದಃ-</u>

1) ತಾವು ನ್ಯಾಯಾಲಯಕ್ಕೆ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಾವಾ ಆಸ್ತಿಯು ಪ್ರಸ್ತುತ ಯಾರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ 25 ಗುಂಟೆಗೆ ಕುನ್ನಿ ವೆಂಕಟೇಗೌಡರವರ ಹೆಸರಿಗೆ ಖಾತೆ ಇತ್ತೆಂದು ತಾವು ಪ್ರಮಾಣ ಪತ್ರದಲ್ಲಿ ಹೇಳಿದ್ದು ದಾಖಲೆ ನೋಡಿದ್ದೀರಾಎಂದರೆ ಇಲ್ಲ ಎನ್ನುತ್ತಾರೆ. ದಾವಾ ಆಸ್ತಿಯು ಇಂದಿಗೂ ನಂಜಮ್ಮ ಕೋಂ ಲೇ.ವೆಂಕಟೇಗೌಡ, ದೇವಮ್ಮ ಕೋಂ ಲೇ. ಕುನ್ನಿ ವೆಂಕಟೇಗೌಡರವರ ಹೆಸರಿಗೆ ಜಂಟಿ ಖಾತೆ ನಮೂದಾಗುತ್ತಾ ಬರುತ್ತಿದೆ ಸರಿ. ನಂಜಮ್ಮ ಮತ್ತು ದೇವಮ್ಮರವರ ಹೆಸರಿಗೆ ಪ್ರತ್ಯೇಕವಾಗಿ ಇಂತಿಷ್ಟು ವಿಸ್ತೀರ್ಣ ಎಂದು ಖಾತೆ ಆಗಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಒಂದು ಅಂದಾಜಿನಲ್ಲಿ ಒಬ್ಬೊಬ್ಬರು ಇಂತಿಷ್ಟು ಎಂದು ವ್ಯವಸಾಯ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿರುವ ಮುಖ್ಯ ವಿಚಾರ ಪ್ರಮಾಣ ಪತ್ರಗಳ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ನಾನು ಅವರ ಪರ ಸುಳ್ಳು ಸಾಕ್ಷ್ಯ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ